International Journal of Kannada Research
www.kannadajournal.com

ISSN: 2454–5813
IJKR 2023; 9(3): 149-155
© 2023 IJKR
www.kannadajournal.com
Received: 12-05-2023
Accepted: 18-06-2023

**ಡಾ. ಯೋಗೇಶ ಎನ್.**
ಸಹಸಂಪಾದಕ, ಕನ್ನಡ ವಿಶ್ವಕೋಶ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಕರ್ನಾಟಕ, ಬಭಾರತ

**Corresponding Author:**
**ಡಾ. ಯೋಗೇಶ ಎನ್.**
ಸಹಸಂಪಾದಕ, ಕನ್ನಡ ವಿಶ್ವಕೋಶ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಕರ್ನಾಟಕ, ಬಭಾರತ

# ವಚನಕಾರರ ಸಾಮಾಜಿಕ ಕ್ರಾಂತಿ

**ಡಾ. ಯೋಗೇಶ ಎನ್.**

**ಪೀಠಿಕೆ**

ಭಾರತೀಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶರಣ ಚಳವಳಿ ಒಂದು ಅಭೂತಪೂರ್ವ ದಾಖಲೆ. ಬಸವಣ್ಣ ಮತ್ತು ಅವನ ಶರಣರಿಂದ ಈ ಶತಮಾನದಲ್ಲಿ ಕನ್ನಡನಾಡಿನಲ್ಲಿ ನಡೆದ ವಿಚಾರ ಕ್ರಾಂತಿಯಿಂದಾಗಿ ಸಮಾಜದಲ್ಲಿ ಒಂದು ಹೊಸ ಬಾಳಿನ ನಾಂದಿ ಹಾಡಿತು. ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಗೆ ಒಂದು ಹೊಸ ಗತಿಯನ್ನು, ತಿರುವನ್ನು ಈ ಸಂದರ್ಭ ನೀಡಿತು. ಬಸವಣ್ಣನವರ ನಾಯಕತ್ವದಲ್ಲಿ ಶರಣರು / ವಚನಕಾರರು ಎಬ್ಬಿಸಿದ ಕ್ರಾಂತಿ ಎಷ್ಟು ಅಪೂರ್ವವೂ ವ್ಯಾಪಕವೂ ಆದದ್ದು ಎಂಬುದನ್ನು ಅರಿಯದವರಿಲ್ಲ.

ವಚನ ಚಳವಳಿಗೂ ಮುನ್ನ ಅಂದರೆ ಹನ್ನೆರಡನೆಯ ಶತಮಾನಕ್ಕೂ ಹಿಂದೆಯೇ ವೈದಿಕ ಧರ್ಮ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಪ್ರಮುಖವಾಗಿ ನಾಲ್ಕು ವರ್ಣಗಳಾಗಿ ವಿಂಗಡಿಸಿತ್ತು. ಅದರೊಳಗಡೆ ಅನೇಕ ಜಾತಿಗಳು, ಉಪಜಾತಿಗಳು ಹುಟ್ಟಿಕೊಂಡು ಛಿದ್ರಗೊಂಡಿದ್ದ ಸಮಾಜದಲ್ಲಿ ಬಡವ–ಶ್ರೀಮಂತ, ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಭಾವನೆಗಳು ಆಚರಣೆಯಲ್ಲಿದ್ದವು. ಸಮಾಜದಲ್ಲಿ ಬಹುಸಂಖ್ಯಾತರಾಗಿದ್ದ ಕೆಳವರ್ಗದವರು ವಿದ್ಯೆ, ಸಂಪತ್ತು ಮತ್ತು ಇತರ ಎಲ್ಲ ಅಧಿಕಾರಗಳಿಂದ ಅವಕಾಶವಂಚಿತರಾಗಿ ಶೋಷಣೆಗೊಳಗಾಗಿದ್ದರು. ಅರ್ಥವಿಲ್ಲದ ಸಂಪ್ರದಾಯಗಳು, ನಂಬಿಕೆ ಆಚರಣೆಗಳು, ಅಂಧಾನುಕರಣೆಗಳೇ ಧಾರ್ಮಿಕ ಆಚರಣೆಗಳಾಗಿದ್ದವು. ಧರ್ಮದ ಹೆಸರಿನಲ್ಲಿ ಧಾರ್ಮಿಕ ವ್ಯಕ್ತಿಗಳು ಹೇಳಿದ್ದೇ ವೇದವಾಕ್ಯ ಎಂದು ನಂಬುವ ಮುಗ್ಧರು, ಅವರನ್ನು ವಂಚಿಸುವ ಪವಾಡಪುರುಷರು, ಮಾಂತ್ರಿಕರ ಸಂಖ್ಯೆ ಅಧಿಕವಾಗಿತ್ತು. ಸಾಮಾನ್ಯ ಜನರ ನಂಬಿಕೆಗಳನ್ನು ದುರುಪಯೋಗಪಡಿಸಿಕೊಂಡು ಅವರನ್ನು ಮೋಸ, ವಂಚನೆ ಮಾಡುವ ಜನರೇ ಹೆಚ್ಚಾಗಿದ್ದರು. ಒಟ್ಟಾರೆ ಶರಣರು ತಮ್ಮ ಚಳವಳಿಯನ್ನು ಆರಂಭಿಸುವ ಪೂರ್ವದಲ್ಲಿ ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜನಜೀವನ ಅನಾಗರಿಕವಾಗಿತ್ತು ಎನ್ನಬಹುದು.

ಇಂತಹ ಸಂದರ್ಭದಲ್ಲಿ ಜಡಗೊಂಡಿದ್ದ ವ್ಯವಸ್ಥೆಯನ್ನು ಸುಧಾರಣೆ ಮಾಡಿ ಜನಸಾಮಾನ್ಯರ ಬದುಕನ್ನು ಉನ್ನತಗೊಳಿಸಲು ಹನ್ನೆರಡನೆಯ ಶತಮಾನದ ಶರಣರು ಶ್ರಮಿಸಿದರು. ಶರಣರು ಎಲ್ಲ ರೀತಿಯ ಮೂಢನಂಬಿಕೆಗಳನ್ನು ತಿರಸ್ಕರಿಸಿದರು. ಆಡಂಬರದ ಎಲ್ಲ ಆಚರಣೆಗಳನ್ನು ವಿರೋಧಿಸಿದರು. ವೇದ, ಶಾಸ್ತ್ರ, ಆಗಮಗಳನ್ನು ಖಡಾಖಂಡಿತವಾಗಿ ಅಲ್ಲಗಳೆದರು. ಸಮಾಜದಲ್ಲಿ ತುಳಿತಕ್ಕೊಳಗಾಗಿದ್ದ ದಲಿತರನ್ನು ಹತ್ತಿರಕ್ಕೆ ಕರೆದು ತಮ್ಮ ಹೃದಯಕ್ಕೆ ಹಚ್ಚಿಕೊಂಡರು. ಉಳ್ಳವರ ಆಸ್ತಿಯಾಗಿದ್ದ ದೇವರನ್ನು ಸ್ವತಂತ್ರಗೊಳಿಸಿ ದೇವರನ್ನು ಜನರ ಕೈಗೇ ನೀಡಿದರು. ಒಟ್ಟಾರೆ ಶರಣರು ಸಮಸಮಾಜವನ್ನು ನಿರ್ಮಿಸಲು ಯತ್ನಿಸಿದರು. ಅವರಿಗಿಂತ ಮೊದಲೇ ಬುದ್ಧ ಸಮಾನತೆಯ ಕನಸನ್ನು ಕಂಡಿದ್ದ. ಆದರೆ ಬುದ್ಧನನ್ನು ಹೊರಹಾಕುವಲ್ಲಿ ಸನಾತನಿಗಳು ಯಶ ಕಂಡಿದ್ದರು. ಶರಣರು ಬುದ್ಧನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ತಕ್ಕಮಟ್ಟಿನ ಯಶಸ್ಸನ್ನು ಪಡೆದರು. ಶರಣರು ಮನುಷ್ಯನನ್ನು ಕಟ್ಟುತ್ತಲೆ ಸಮಾಜವನ್ನು ಕಟ್ಟಿದರು.

ಒಂದೆಡೆ ಪುರೋಹಿತಶಾಹಿಯನ್ನು ಪ್ರತಿಭಟಿಸಿ, ಮತ್ತೊಂದು ಕಡೆ ರಾಜಶಾಹಿಯನ್ನು ಧಿಕ್ಕರಿಸಿ ಜಡವ್ಯವಸ್ಥೆಯನ್ನು ಛಿದ್ರಗೊಳಿಸುತ್ತಾ, ಶೋಷಣೆಯ ಸರ್ವ ಪ್ರಕಾರಗಳಿಗೂ ಪೂರ್ಣವಿರಾಮ ಹಾಕಿ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಸರ್ವೋದಯವನ್ನು ಸಾಧಿಸುವ ಆಶಯ ವಚನಕಾರರದಾಗಿತ್ತು. ಒಂದು ರೀತಿ ಪ್ರಜಾಪ್ರಭುತ್ವದ ಸ್ಥಾಪನೆ ಶರಣರ ಜನಪರ ಆಂದೋಲನದ ಗುರಿಯಾಗಿತ್ತು. ಅವರ ಮತ್ತೊಂದು ಮಹತ್ವದ ಕೊಡುಗೆಯೆಂದರೆ ವಚನಗಳು. ವಚನಗಳು ಶರಣರ

ಚಳವಳಿಯ ಸ್ವರೂಪವನ್ನು ಅರಿಯಲು ನೆರವಾಗಿದೆ. ಹಾಗೆಯೇ ಶರಣರ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳ ಲಿಖಿತ ದಾಖಲೆಗಳಾಗಿರುವುದರಿಂದ ಅವರ ಚಳವಳಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ವಚನಕಾರರ ಉದ್ದೇಶ ಸಾಹಿತ್ಯ ನಿರ್ಮಾಣವಾಗಿರಲಿಲ್ಲ. ಅವರ ಮುಖ್ಯ ಉದ್ದೇಶ ಸಮಾಜ ಸುಧಾರಣೆಯಾಗಿತ್ತು. ಆದರೆ ಅವರಿಗರಿವಿಲ್ಲದಂತೆಯೇ ವಚನಗಳು ಸಾಹಿತ್ಯದೃಷ್ಟಿಯಿಂದಲೂ ಮಹತ್ವವನ್ನು ಪಡೆದುಕೊಂಡಿವೆ. ಸಮಾಜೋಧಾರ್ಮಿಕ ಚಿಂತನೆಯ ಹಿನ್ನೆಲೆಯಲ್ಲಿ ಜನರಿಂದ ಜನರಿಗಾಗಿ ಆರಂಭವಾದ ಈ ಜನಪರ ಆಂದೋಲನ ಸಹಜವಾಗಿಯೇ ತನ್ನ ಆಲೋಚನೆಗಳು, ತತ್ವಗಳು, ವಿಚಾರಗಳನ್ನು ವಚನಗಳ ಮೂಲಕ ಜನರ ಭಾಷೆಯಲ್ಲಿ ಹಿಡಿದಿಡಲು ಪ್ರಯತ್ನಿಸಿತು. ಶರಣರು ತಮ್ಮ ವಚನಗಳ ಮೂಲಕ ಕಂದಾಚಾರ, ಮೂಢನಂಬಿಕೆ, ಅಜ್ಞಾನಗಳ ವಿರುದ್ಧ ಸಮರ ಸಾರಿದರು. ವೇದಶಾಸ್ತ್ರ, ಪುರಾಣಗಳನ್ನು ಖಂಡಿಸಿದರು. ಪುರೋಹಿತಶಾಹಿಗಳ ಮೋಸ, ವಂಚನೆ, ಯಜ್ಞಯಾಗಾದಿಗಳ ನಿಷ್ಪ್ರಯೋಜಕತೆಯನ್ನು ಅನಾವರಣಗೊಳಿಸಿದರು. ಜಾತಿಪದ್ಧತಿ, ವರ್ಣವ್ಯವಸ್ಥೆ, ಶ್ರೇಷ್ಠ–ಕನಿಷ್ಠ, ಸ್ಪೃಶ್ಯ–ಅಸ್ಪೃಶ್ಯ ಇಂತಹ ಎಲ್ಲ ರೀತಿಯ ಅಸಮಾನತೆಗಳು, ಲಿಂಗತಾರತಮ್ಯ ನೀತಿ ಮೊದಲಾದವುಗಳನ್ನೆಲ್ಲ ತಮ್ಮ ವಚನಗಳ ಮೂಲಕ ಅವಲೋಕಿಸಿ, ವಿಮರ್ಶಿಸಿ, ಅವುಗಳ ಅಗತ್ಯ–ಅನಗತ್ಯಗಳನ್ನು ಪ್ರಶ್ನಿಸಿ, ಖಂಡಿಸಿ ತಿರಸ್ಕರಿಸಿದರು. ಶರಣರು ಹೆಚ್ಚಿನ ಆಸಕ್ತಿ ತೋರಿಸಿದ್ದು ಶ್ರೀಸಾಮಾನ್ಯರ ಬಗ್ಗೆಯೇ. ಶರಣರ ಬಹುತೇಕ ವಚನಗಳಲ್ಲಿಯೂ ಶ್ರೀಸಾಮಾನ್ಯರೇ ಮುಖ್ಯರಾಗಿದ್ದಾರೆ. ಅವರದ್ದು ಜನರ ನಿಲುವು. ಜನಪರವಾದ ನಿಲುವು.

**ವೇದಶಾಸ್ತ್ರ ಪುರಾಣಗಳನ್ನು ಕುರಿತು**

ಪ್ರಾಚೀನ ಕನ್ನಡ ಕವಿಗಳಾಗಲಿ, ಸಂಸ್ಕೃತ ಕವಿಗಳಾಗಲಿ ಪುರಾಣಗಳಲಿ ಪರಿಣಿತರಾಗಿದ್ದನ್ನು ನೋಡಬಹುದು. ಹಾಗೆಯೇ ಅವರ ಕಾವ್ಯಗಳಿಗೆ ಪುರಾಣಗಳೂ ಮುಖ್ಯವಾದ ಆಕರಗಳಾಗುತ್ತಿದ್ದವು. ವಚನಕಾರರು ವೇದ, ಪುರಾಣ, ಶಾಸ್ತ್ರಗಳನ್ನು ಉಗ್ರವಾಗಿ ಖಂಡಿಸಿದರು. ವೇದ ಪುರಾಣಗಳು, ಯಜ್ಞಯಾಗಾದಿಗಳು ಮನುಷ್ಯ ಮನುಷ್ಯರ ನಡುವೆ ಕಂದಕವನ್ನುಂಟು ಮಾಡಿದ್ದವು. ವೇದಾದಿಗಳನ್ನು ವಚನಕಾರರು ಅಲ್ಲಗಳೆಯುವ ರೀತಿಗೆ ಕೆಲವು ನಿದರ್ಶನಗಳನ್ನಿಲ್ಲಿ ನೋಡಬಹುದು. ಬಸವಣ್ಣನವರು :

ಶಾಸ್ತ್ರ ಘನವೆಂಬೆನೆ ? ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ ? ಪ್ರಾಣಿವಧೆಯ ಹೇಳುತ್ತಿದೆ
ಶ್ರುತಿ ಘನವೆಂಬೆನೆ ? ಮುಂದಿಟ್ಟರಸುತ್ತಿದೆ
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು
ಕೂಡಲಸಂಗಮದೇವನ.

ಬಸವಣ್ಣನವರಿಗೆ ಶಾಸ್ತ್ರ, ವೇದ, ಶ್ರುತಿಗಳು ದೊಡ್ಡವು ಎಂದು ಕಾಣಿಸುವುದಿಲ್ಲ. ಅವು ಕರ್ಮವನ್ನು, ಪ್ರಾಣಿವಧೆಯನ್ನು ಹಾಗೂ ಅನೇಕ ಗೊಂದಲಗಳನ್ನು ಸೃಷ್ಟಿಸುತ್ತವೆ. ತ್ರಿವಿಧದಾಸೋಹದಿಂದ ಮಾತ್ರವೇ ಕೂಡಲಸಂಗಮದೇವನನ್ನು ಕಾಣಬಹುದು. ಈ ವೇದ, ಶಾಸ್ತ್ರ, ಶ್ರುತಿಗಳು ಭಗವಂತನನ್ನು ತೋರಿಸಲಾರವು ಎಂದು ಹೇಳುತ್ತಾರೆ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ
ನೋಡಯ್ಯಾ, ಮಹಾದಾನಿ ಕೂಡಲಸಂಗಮದೇವಾ
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ

ಮನುಷ್ಯರ ಒಗ್ಗಟ್ಟಿಗೆ ತಡೆಗೋಡೆಯಾಗಿರುವ ಈ ವೇದ ಶಾಸ್ತ್ರ ಪುರಾಣಗಳನ್ನು ತುಂಡರಿಸಬೇಕೆನ್ನುವ ಸಾತ್ವಿಕ ಸಿಟ್ಟು ಈ ವಚನದಲ್ಲಿ ನೆಲೆಯಾಗಿದೆ. ಇವೆಲ್ಲವು ಆ ಕಾಲದಲ್ಲಿ ಜನರಿಗೆ ಅರಿವಿಗೆ ಬೆಳಕಾಗುವ ಬದಲು ವಿಪ್ರರ ಸ್ವತ್ತಾಗಿ, ಕೆಳವರ್ಗದವರನ್ನು ಶೋಷಿಸುವ ಪ್ರಬಲ ಅಸ್ತ್ರಗಳಾಗಿದ್ದವು. ಬಸವಣ್ಣನವರು ಈ ವಚನದಲ್ಲಿ ಬಳಸುವ ಪದಗಳು ಅವರ ಪ್ರತಿಭಟನೆಯ ಪ್ರತೀಕಗಳಾಗಿ ಕಂಡುಬರುತ್ತವೆ.

ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ
ಭಾರತಪುರಾಣ ಗೋತ್ರಕ್ಕೆ ಮಾರಿ
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವಾ

ಎಂದು ಸಮಸ್ತ ಪುರಾಣಗಳನ್ನು ಟೀಕಿಸಿದ್ದಾರೆ.
ಅಲ್ಲಮಪ್ರಭುವಿನ ಖಂಡನೆ :

ವೇದವೆಂಬುದು ಓದಿನ ಮಾತು ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ
ಭಕ್ತಿಯೆಂಬುದು ತೋರುಂಬ ಲಾಭ ಗುಹೇಶ್ವರನೆಂಬುದು ಮೀರಿದ ಘನವು.

ಇನ್ನೊಂದು ವಚನದಲ್ಲಿ

ವೇದಗಳೆಂಬವು ಬ್ರಹ್ಮನ ಬೂತಾಟ
ಶಾಸ್ತ್ರಗಳೆಂಬವು ಸರಸ್ವತಿಯ ಗೊಡ್ಡಾಟ
ಆಗಮಗಳೆಂಬವು ಋಷಿಯ ಮರುಳಾಟ

ಎಂದು ಹೇಳಿ

ಓದಿ ಓದಿ ವಾದಕ್ಕಿಕ್ಕಿತ್ತು
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತು
ಅರಿದೆ ಅರಿದೆನೆಂದು ಆಗಮ ಅಗಲಕ್ಕೆ ಹರಿಯಿತ್ತಲ್ಲಯ್ಯಾ
ನೀನೆತ್ತ ನಾನೆತ್ತಲೆಂದು
ಬೊಮ್ಮ ಬಕ್ಕಟ ಬಯಲು ಗುಹೇಶ್ವರಾ

**ಎಂದು ಹೇಳಿದ್ದಾರೆ**

ವೇದಶಾಸ್ತ್ರ ಪುರಾಣಗಳ ಅಧ್ಯಯನದಿಂದ ವ್ಯರ್ಥಕಾಲಹರಣವಾಗುತ್ತದೆಯೇ ಹೊರತು ಅವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ಅಲ್ಲಮನ ನಿಲುವಾಗಿದೆ. ವೇದಶಾಸ್ತ್ರ ಪುರಾಣಗಳನ್ನು ನಿರಾಕರಿಸುವ ಮೂಲಕ ವೈದಿಕಸಂಪ್ರದಾಯದ ಬಗ್ಗೆ ಅಲ್ಲಮಪ್ರಭು ಪ್ರತಿಭಟನೆಯನ್ನು ದಾಖಲು ಮಾಡಿದ್ದಾರೆ.

ಅಕ್ಕಮಹಾದೇವಿಯ ಟೀಕೆ ಹೀಗಿದೆ

ವೇದಶಾಸ್ತ್ರ ಪುರಾಣಗಳೆಂಬುವ
ಕೊಟ್ಟಣದ ಕುಟ್ಟುತ್ತ ನುಚ್ಚು ತೌಡು ಕಾಣಿ ಭೊ
ಇವ ಕುಟ್ಟಲೇಕೆ ? ಕುಸಕಲೇಕೆ ?

ಅಕ್ಕಮಹಾದೇವಿಯ ದೃಷ್ಟಿಯಲ್ಲಿ ಈ ವೇದಶಾಸ್ತ್ರ ಪುರಾಣಗಳೆಲ್ಲ ಬತ್ತವನ್ನು ಕುಟ್ಟಿ, ಅದರ ತಿರುಳನ್ನು ತೆಗೆದ ನಂತರ ಎಸೆಯುವ ನುಚ್ಚು ತೌಡುಗಳಿದ್ದಂತೆ. ಅಂದರೆ ಅವೆಲ್ಲ ನಿಸ್ಸತ್ವದಿಂದ ಕೂಡಿದವು ಎನ್ನುತ್ತಾಳೆ. ಆಕೆಯ ದೃಷ್ಟಿಯಲ್ಲಿ ಅವೆಲ್ಲ ನಿರುಪಯುಕ್ತ ವಸ್ತುಗಳು. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂಬ ಭಾವ ವಚನದ್ದು.
ವೇದಗಳು, ಶಾಸ್ತ್ರಗಳು, ಸ್ಮೃತಿಗಳು ಸ್ವಯಂಭೂವೆಂದು ಕೆಲವರ ವಾದ. ಅಂಬಿಗರ ಚೌಡಯ್ಯ ಇವುಗಳನ್ನು ಗೇಲಿ ಮಾಡುತ್ತಾನೆ. ಈ ವಾದವೂ ಸ್ವಯಂಭೂ ಅಲ್ಲವೆಂದು ಈ ವಚನದಲ್ಲಿ ಹೇಳಿದ್ದಾನೆ.

ನಾದದ ಭಯದಿಂದ ವೇದಂಗಳಾದವಲ್ಲದೆ
ವೇದ ಸ್ವಯಂಭುವಲ್ಲ ನಿಲ್ಲು
ಮಾತಿನ ಬಲದಿಂದ ಶಾಸ್ತ್ರಂಗಳಾದವಲ್ಲದೆ
ಶಾಸ್ತ್ರ ಸ್ವಯಂಭುವಲ್ಲ ನಿಲ್ಲು
ಪಾಷಾಣದ ಬಲದಿಂದ ಸಮಯಂಗಳಾದವಲ್ಲದೆ
ಸಮಯ ಸ್ವಯಂಭುವಲ್ಲ ನಿಲ್ಲು

– ಎಂದು ಪುರೋಹಿತರ ಹೆಣೆದಿದ್ದ ಬಲೆಯನ್ನು ಅಂಬಿಗರ ಚೌಡಯ್ಯನು ಕಿತ್ತು ಬಿಸಾಡುತ್ತಾನೆ. ವೇದವನ್ನು ಮೂಲ ಮನೋವ್ಯಾಧಿಯೆನ್ನುವ ಸಿದ್ಧರಾಮನ ವಚನ ಇಂತಿದೆ.

ಶಾಸ್ತ್ರವೆಂಬುದು ಮನ್ಮಥ ಶಸ್ತ್ರವಯ್ಯಾ
ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ
ಪುರಾಣವೆಂಬುದು ಮೃತವಾದವರ ಗಿರಾಣವಯ್ಯಾ
ತರ್ಕವೆಂಬುದು ಮರ್ಕಟಾಟವಯ್ಯಾ
ಆಗಮವೆಂಬುದು ಯೋಗದ ಘೋರವಯ್ಯಾ
ಇತಿಹಾಸವೆಂಬುದು ರಾಜಕಥಾ ಭಾಗವಯ್ಯಾ
ಸ್ಮೃತಿಯೆಂಬುದು ಪಾಪಪುಣ್ಯ ವಿಚಾರವಯ್ಯಾ
ಆದ್ಯರ ವಚನವೆಂಬುದು ಬಹು ವೇದ್ಯವಯ್ಯಾ
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ತಿಳಿಯಲಿಕ್ಕೆ

ಇಲ್ಲಿ ಸಿದ್ಧರಾಮನು ವೇದ, ಶಾಸ್ತ್ರ, ಪುರಾಣ, ತರ್ಕ, ಆಗಮದ ಜೊತೆಗೆ ಇತಿಹಾಸವನ್ನು ಲೇವಡಿ ಮಾಡಿದ್ದಾನೆ. ಅವನ ದೃಷ್ಟಿಯಲ್ಲಿ ಇವೆಲ್ಲವುಗಳಿಂದ ಶಿವಶರಣರ ಮಾತುಗಳೇ ಶ್ರೇಷ್ಠವಾದವು. ಬಹಳಷ್ಟು ವಚನಕಾರರು ವೇದ, ಶಾಸ್ತ್ರ, ಆಗಮ, ಪುರಾಣಗಳನ್ನು ಯಾವ ಅಂಜಿಕೆಯೂ ಇಲ್ಲದೆ ಖಂಡಿಸಿದ್ದಾರೆ. ವೇದಶಾಸ್ತ್ರಗಳು ದೈವನಿರ್ಮಿತ. ಅವುಗಳ ಸಂದೇಶ ಸಾರ್ವಕಾಲಿಕ ಎಂದು ಸಾಮಾನ್ಯರಲ್ಲಿ ಭ್ರಮೆಯನ್ನು ಉಂಟುಮಾಡಿದ್ದ ವೈದಿಕವ್ಯವಸ್ಥೆಯನ್ನು ವಚನಕಾರರು ಛಿದ್ರಗೊಳಿಸಿದರು. ಗಮನಿಸಬೇಕಾದ ವಿಚಾರವೆಂದರೆ ವೇದ, ಶಾಸ್ತ್ರ, ಪುರಾಣಗಳನ್ನು ತಿರಸ್ಕರಿಸಬೇಕಾದರೆ, ಅದನ್ನು ತಿರಸ್ಕರಿಸದವರು ಆಳವಾದ ಅಧ್ಯಯನ, ಪ್ರತಿಭೆ, ಪಾಂಡಿತ್ಯವನ್ನು ಹೊಂದಿರಲೇಬೇಕಾಗುತ್ತದೆ. ವಚನಕಾರರು ಆ ಕೆಲಸವನ್ನು ಶ್ರದ್ಧೆಯಿಂದ ಮಾಡಿದ್ದರು. ಹಾಗಾಗಿಯೇ ಅಂತಹ ಧೈರ್ಯ ಅವರಿಂದ ಮೂಡಿಬಂದಿದೆ ಎನ್ನಬಹುದು. 12ನೆಯ ಶತಮಾನದಲ್ಲಿ ಅವರು ತೋರಿಸಿದ ಆ ಧೈರ್ಯವೂ ಒಂದು ಅದ್ಭುತವೇ ಎನ್ನಬಹುದು.

**ಮೂರ್ತಿಪೂಜೆ ಮತ್ತು ದೇವಾಲಯಗಳ ತಿರಸ್ಕಾರ**
ಪ್ರಾಚೀನ ಕಾಲದಿಂದಲೂ ಕರ್ನಾಟಕದ ಜನಜೀವನದ ಮೇಲೆ ದೇವಾಲಯಗಳು ಮಹತ್ತರ ಪ್ರಭಾವವನ್ನು ಬೀರಿರುವುದನ್ನು ಗುರುತಿಸಬಹುದು. ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ಎಲ್ಲ ವ್ಯವಸ್ಥೆಗಳ ಮೇಲೂ ದೇವಾಲಯಗಳು ಬೀರಿದ್ದ ದಟ್ಟ ಪ್ರಭಾವವನ್ನು ವಿದ್ವಾಂಸರನೇಕರು ಗುರುತಿಸಿದ್ದಾರೆ. ಆ ಸಂದರ್ಭದಲ್ಲಿ ದೇವಾಲಯಗಳು ಸಮಾಜದ ಜನರನ್ನು ಒಂದುಗೂಡಿಸುವ ಬದಲು ವರ್ಣ, ಜಾತಿ, ಲಿಂಗಭೇದ ನೀತಿಗಳಿಂದಾಗಿ ಒಡೆದಿದ್ದವು. ದೇವರು–ಧರ್ಮದ ಹೆಸರಿನಲ್ಲಿ ಪುರೋಹಿತಶಾಹಿಗಳಿಂದ ಸಾಮಾನ್ಯ ಜನರ ಶೋಷಣೆ ನಡೆಯುತ್ತಿತ್ತು. 12ನೇ ಶತಮಾನದ ವಚನಕಾರರು ದೇವಾಲಯವನ್ನು, ಸ್ಥಾವರ ಲಿಂಗಪೂಜೆಯನ್ನು ನಿರಾಕರಿಸುವ ಮೂಲಕ, ಧರ್ಮ ಮತ್ತು ಪೂಜಾರಿಗಳ ಕೈಯಲ್ಲಿದ್ದ ದೇವರನ್ನು ಬಿಡುಗಡೆಗೊಳಿಸಿ ಅವನನ್ನು ಭಕ್ತರ ಕೈಗೆ ನೀಡಿ ಬಹುದೊಡ್ಡ ಕ್ರಾಂತಿಯನ್ನು ಮಾಡಿದರು. ಶೋಷಣೆಯ ಕೇಂದ್ರವಾಗಿದ್ದ ದೇವಾಲಯ ಸಂಸ್ಕೃತಿಯನ್ನು ವಿರೋಧಿಸಿ ಭಕ್ತಿಯ ಆಚರಣೆಯನ್ನು ಎಲ್ಲ ಜಾತಿ–ವರ್ಗದವರಿಗೂ ಮುಕ್ತಗೊಳಿಸಿದರು.
ದೇವಾಲಯ ಸಂಸ್ಕೃತಿಯನ್ನು ವಿರೋಧಿಸಿದವರಲ್ಲಿ ಪ್ರಮುಖವಾಗಿ ಎದ್ದುಕಾಣುವವರು ಬಸವಣ್ಣ. ಅವರು ಸಮಾಜದ ಎಲ್ಲ ವೈಷಮ್ಯಗಳನ್ನು ಅಡಗಿಸಿಟ್ಟುಕೊಂಡಿದ್ದ ದೇವಾಲಯ, ಸ್ಥಾವರ ಪೂಜೆಗಳನ್ನು ನಿರಾಕರಿಸಿದರು.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ? ಬಡವನಯ್ಯಾ,
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಸಿರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

ಇಡೀ ವಚನಚಳವಳಿಯ ಸಾರಸತ್ವವಾಗಿ ಈ ವಚನ ಕಂಡುಬರುತ್ತದೆ. ಇಡೀ ವಚನದಲ್ಲಿ ಒಂದು ಬಗೆಯ ವಿಡಂಬನಾತ್ಮಕತೆಯಿದೆ. ಭಕ್ತನು ಬಡವನಾಗಿರುವುದರಿಂದ ಆತ ಶಿವಾಲಯವನ್ನು ನಿರ್ಮಿಸಲಾರ; ನಿರ್ಮಿಸಲು ಭಕ್ತ ಅಸಹಾಯಕನಾಗಿದ್ದಾನೆ ಎಂದು ಈ ವಚನವನ್ನು ಅರ್ಥೈಸಿಕೊಂಡರೆ ಒಂದು ಮಿತಿಯನ್ನು ಹಾಕಿದಂತಾಗುತ್ತದೆ. ಬಸವಣ್ಣ ಇಲ್ಲಿ ಶಿವಾಲಯ – ಅದಕ್ಕೆ ಅಂಟಿಕೊಂಡಿರುವ ಶ್ರೀಮಂತಿಕೆ, ಭಕ್ತಿಯ ಸ್ಥಾವರತೆ ಇವೆಲ್ಲವನ್ನೂ ವಿಡಂಬಿಸುವ ಕಾರ್ಯವನ್ನು ಮಾಡಿದ್ದಾರೆ. ದೇವಾಲಯದಲ್ಲಿರುವ ದೇವರು ಉಳ್ಳವರ ಪಕ್ಷಪಾತಿಯಾಗಿದ್ದಾನೆ. ಇಂತಹ ದೇವರ ಗೊಡವೆಯನ್ನು ಶರಣರು ತಿರಸ್ಕರಿಸಿ ತಮ್ಮ ಇಡೀ ದೇಹವನ್ನೇ ದೇವಸ್ಥಾನವನ್ನಾಗಿಸಿ ಲೌಕಿಕದ ದೇವಸ್ಥಾನಗಳನ್ನೂ ನಿರಾಕರಿಸುತ್ತಾರೆ.

ಅಲ್ಲಮಪ್ರಭು ತನ್ನ ವಚನದಲ್ಲಿ

ದೇಹದೊಳಗೆ ದೇವಾಲಯವಿದ್ದು
ಮತ್ತೆ ಬೇರೆ ದೇವಾಲಯವೇಕೆ ?
ಎರಡಕ್ಕೆ ಹೇಳಲಿಲ್ಲಯ್ಯಾ
ಗುಹೇಶ್ವರಾ, ನೀನು ಕಲ್ಲಾದಡೆ ನಾನೇನಪ್ಪೆನು ?

ಎಂದು ಹೇಳಿ, ಬಸವಣ್ಣನವರ ಧಾಟಿಯಲ್ಲಿಯೇ ದೇಹದಲ್ಲಿಯೇ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯದ ಅಗತ್ಯವೇಕೆ ? ಎಂದು ಪ್ರಶ್ನೆ ಮಾಡುತ್ತಾನೆ. ಹಾಗೆಯೇ

ಮರ್ತ್ಯಲೋಕದ ಮಾನವರು
ದೇಗುಲದೊಳಗೊಂದು ದೇವರು ಮಾಡಿದಡೆ ಆನು ಬೆರಗಾದೆನಯ್ಯಾ ।
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ
ಭೋಗವ ಮಾಡುವರ ಕಂಡು ನಾನು ಬೆರಗಾದೆನು

ಎಂದು ಹೇಳಿ

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೋ ?
ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ – ಗುಹೇಶ್ವರಾ.

ಎಂದು ತನ್ನ ವಚನಗಳಲ್ಲಿ ದೇವರವಿಗ್ರಹದ ಪ್ರತಿಷ್ಠಾಪನೆ ಮತ್ತು ಪೂಜೆಯನ್ನು ವಿರೋಧಿಸಿ, ಮೂರ್ತಿ ಪ್ರತಿಷ್ಠೆ ಮಾಡಿದವರಿಗೆ ನರಕಪ್ರಾಪ್ತಿಯಾಗುತ್ತದೆಂದು ಹೇಳಿದ್ದಾರೆ. ಅಲ್ಲಮನು ಅನೇಕ ವಚನಗಳಲ್ಲಿ ಕಠಿಣವಾದ ಮಾತುಗಳಲ್ಲಿಯೇ ದೇವಾಲಯ ಸಂಸ್ಕೃತಿಯನ್ನು ಖಂಡಿಸಿದ್ದಾರೆ. ಅಲ್ಲಮನ ವಚನಗಳಲ್ಲಿ ಹೆಚ್ಚು ವೈಚಾರಿಕ ಪ್ರಖರತೆಯಿದೆ. ದೇವರಿಗೆ ಸವಾಲನ್ನು ಒಡ್ಡುವ ಹಾಗೂ ದೇವರಿಗಿಂತ ಮಾನವನೇ ದೊಡ್ಡವನೆನ್ನುವ ವಚನಗಳಲ್ಲಿ ಸಾಮಾನ್ಯ ಜನರಲ್ಲಿ ಒಂದು ಬಗೆಯ ಆತ್ಮವಿಶ್ವಾಸವನ್ನು ಮೂಡಿಸಲು ಪ್ರೇರಣೆ ಕಂಡುಬರುತ್ತದೆ.

ಜನಸಾಮಾನ್ಯರಲ್ಲಿದ್ದ ಅಜ್ಞಾನ, ಮೂರ್ಖತನಗಳನ್ನು ಹೋಗಲಾಡಿಸಲು ವಚನಕಾರರು ಶ್ರಮಿಸಿದರು. ಮಣ್ಣು, ಕಲ್ಲು, ಮರಗಳಿಂದ ಮಾಡಿದ ದೇವರ ಪ್ರತಿಮೆಗಳನ್ನು ಪೂಜಿಸುವುದರಿಂದ ಎಲ್ಲವೂ ವ್ಯರ್ಥವೇ ಹೊರತು ಅದರಿಂದ ಯಾವುದೇ ಪ್ರಯೋಜನಗಳಿಲ್ಲವೆಂಬುದನ್ನು ವಚನಕಾರರು ಸಾರಿದರು. ಚೆನ್ನಬಸವಣ್ಣನವರ ಅಂತಹ ಒಂದು ವಚನ ಇಂತಿದೆ.

ಕಲ್ಲದೇವರ ಪೂಜೆಯ ಮಾಡಿ
ಕಲಿಯುಗದ ಕತ್ತೆಗಳಾಗಿ ಹುಟ್ಟಿದರಯ್ಯಾ
ಮಣ್ಣದೇವರ ಪೂಜೆಯ ಮಾಡಿ
ಮಣ್ಣಾಗಿ ಹುಟ್ಟಿದರಯ್ಯಾ
ಮರನ ದೇವರ ಪೂಜೆಯ ಮಾಡಿ
(ಎಗ್ಗ)ಗಳಾದರಯ್ಯಾ
ಜಂಗಮ ದೇವರ ಪೂಜೆಯಮಾಡಿ
ಪ್ರಾಣಲಿಂಗಿ ಪ್ರಸಾದಿಗಳಾದರಯ್ಯಾ

ಈ ವಚನದಲ್ಲಿ ನಿರ್ಜೀವ ದೇವರುಗಳ ಪೂಜೆಗಿಂತ, ಜೀವಂತ ಮನುಷ್ಯರ ಪೂಜೆಗೆ ಮಹತ್ವ ನೀಡಿರುವುದನ್ನು ಗಮನಿಸಬಹುದು. ಇಲ್ಲಿ ಚೆನ್ನಬಸವಣ್ಣ ಯಾವ್ಯಾವೊದೋ ವಸ್ತುಗಳಲ್ಲಿ ದೇವರಿದ್ದಾನೆಂಬ ಸಾಂಪ್ರದಾಯಿಕ ನಂಬಿಕೆಯನ್ನು ನಿರಾಕರಿಸಿದ್ದಾರೆ. ಅಂಬಿಗರ ಚೌಡಯ್ಯನು ಸಹ ಸ್ಥಾವರಲಿಂಗ ಮತ್ತು ದೇವರ ವಿಗ್ರಹಗಳನ್ನು ಪೂಜಿಸುವುದನ್ನು ವಿರೋಧಿಸಿದ್ದಾರೆ. ಅವರ ಒಂದು ವಚನ ಇಂತಿದೆ.

ಬೆಟ್ಟದ ಲಿಂಗವ ಹಿರಿದು ಮಾಡಿಕೊಂಡು ಪರಿವ
ಖೊಟ್ಟಿ ಮೂಳರಿರಾ ಬಿಟ್ಟು ಕೊಡಿ ನಿಮ್ಮ ಇಷ್ಟಲಿಂಗವ !
ನಮ್ಮ ಕೈಗೆ ಕೊಡದಿದ್ದರೆ,
ನಟ್ಟ ನಡು ನೀರೊಳಗೊಯ್ದು, ಕಟ್ಟಿ ಮುಳುಗಿಸಿ
ನಿಮ್ಮನು ಲಿಂಗೈಕ್ಯರ ಮಾಡುವೆನೆಂದಾತ ನಮ್ಮಂಬಿಗರ ಚೌಡಯ್ಯ !

ಬಹಳ ಕಟು ಮಾತುಗಳಲ್ಲಿಯೇ ಅಂಬಿಗರ ಚೌಡಯ್ಯರ ವಚನಗಳು ಕಂಡುಬರುತ್ತವೆ. ಇಷ್ಟಲಿಂಗಕ್ಕಿಂತ ಬೆಟ್ಟದಲ್ಲಿರುವ ಲಿಂಗವನ್ನು ಪೂಜಿಸುವವರ ವಿರುದ್ಧ ವಚನಕಾರರು ಒಂದು ರೀತಿಯ ಸಮರವನ್ನೇ ಸಾರಿದರು. ಜನರ ಮಾನಸಿಕವಾದ ಗುಲಾಮಗಿರಿತನವನ್ನು ಹೊಡೆದೋಡಿಸುವಲ್ಲಿ, ಅರಿವಿನ ಮಟ್ಟವನ್ನು ಹೆಚ್ಚಿಸುವಲ್ಲಿ ವಚನಕಾರರು ಪಟ್ಟ ಶ್ರಮ ಅದ್ವಿತೀಯವಾದುದು. ಅವರಿಗೆ ದೇವರು–ದೇವಾಲಯ–ಗರ್ಭಗುಡಿ ಇವುಗಳೆಲ್ಲ ಕೆಲಸವಿಲ್ಲದವರು ಮಾಡಿಕೊಂಡ ವ್ಯವಸ್ಥೆ ಎಂದು ತಿಳಿದಿತ್ತು. ಆ ಕಾರಣದಿಂದಾಗಿಯೇ ಅವರು ದೇಹವನ್ನೇ ದೇಗುಲವೆಂದು ಸಾರಿ ಕಾಯಕದ ಮಹತ್ವವನ್ನು ಎತ್ತಿ ಹಿಡಿದರು.

ಇದೇ ನೆಲೆಯಲ್ಲಿ ವಚನಕಾರರು ಖಂಡಿಸಿದ ಪದ್ಧತಿಯೆಂದರೆ ಬಹುದೇವತಾರಾಧನೆ. ಅವರ ಕಾಲದಲ್ಲಿ ಬಹುದೇವತಾರಾಧನೆ ಚಾಲ್ತಿಯಲ್ಲಿತ್ತು. ವಿಷ್ಣು, ಶಿವ, ಇಂದ್ರಾದಿ ದೇವತೆಗಳು ಮೇಲ್ವರ್ಗದವರ ದೇವತೆಗಳಾದರೆ ಮಾರಿ, ಮಸಣಿ, ದುರ್ಗಿ, ಕಾಳಿ, ಚೌಡಿ ಮುಂತಾದ ಕ್ಷುದ್ರದೇವತೆಗಳೂ ಕೆಳವರ್ಗದವರ ಆರಾಧ್ಯದೇವತೆಗಳಾಗಿದ್ದವು. ಹಾಗೆಯೇ ದಿನನಿತ್ಯ ಉಪಯೋಗಿಸುತ್ತಿದ್ದ ಅನೇಕ ವಸ್ತುಗಳು ದೈವದ ಪಟ್ಟಕ್ಕೆ ಏರಿದ್ದವು. ಇಂತಹ ಪದ್ಧತಿಯನ್ನು ಖಂಡಿಸಿದ ವಚನಕಾರರು ಏಕದೇವೋಪಾಸನೆ (ಇಷ್ಟಲಿಂಗ ಉಪಾಸನೆ)ಯನ್ನು ಆಚರಣೆಗೆ ತರಲು ಪ್ರಯತ್ನಿಸಿದರು. ತಮ್ಮ ವಚನಗಳಲ್ಲಿ ದೇವರುಗಳನ್ನು, ದೇವರುಗಳ ದೋಷ ದೌರ್ಬಲ್ಯಗಳನ್ನು ಟೀಕೆ, ವ್ಯಂಗ್ಯ, ವಿಡಂಬನೆಗಳ ಮೂಲಕ ಖಂಡಿಸಿ ತಿರಸ್ಕರಿಸಿದರು. ಆ ಮೂಲಕ ನಿರುಪಯುಕ್ತ ಬಹುದೇವತಾರಾಧನೆಯನ್ನು ಕೈಬಿಡುವಂತೆ ಜನರಲ್ಲಿ ಅರಿವು ಮೂಡಿಸಿದರು.

ಹಿಂದೂಧರ್ಮದ ಪ್ರಧಾನ ದೇವತೆಗಳಲ್ಲಿ ಒಂದೊಂದು ಕ್ಷೇತ್ರಕ್ಕೆ ಒಬ್ಬೊಬ್ಬರು ಅಧಿದೇವತೆಗಳಾಗಿದ್ದಾರೆ. ಇಂಥ ಅಧಿದೇವತೆಗಳನ್ನು ಬಸವಣ್ಣ ತನ್ನ ವಚನದಲ್ಲಿ ಹೀಗೆ ವಿಡಂಬಿಸಿದ್ದಾರೆ.

ಹುಟ್ಟಿಸುವಾತ ಬ್ರಹ್ಮನೆಂದು, ರಕ್ಷಿಸುವಾತ ವಿಷ್ಣುವೆಂಬರು ನೋಡಾ
ಬ್ರಹ್ಮ ತನ್ನ ಶಿರವನೇತಕ್ಕೆ ಹುಟ್ಟಿಸಲಾರ ?
ವಿಷ್ಣು ತನ್ನ ಮಗನನೇತಕ್ಕೆ ರಕ್ಷಿಸಲಾರ
ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲಕ ನಮ್ಮ ಕೂಡಲ ಸಂಗಮದೇವಾ.

ಈ ವಚನದ ಮೂಲಕ ಹಲವು ದೇವರುಗಳ ಕಲ್ಪನೆಯನ್ನು ನಿರಾಕರಿಸುವುದನ್ನು ಕಾಣಬಹುದು. ಹಾಗೆಯೇ ಕೆಳವರ್ಗದ ದೇವತೆಗಳ ಹೆಸರುಗಳು ಮತ್ತು ಅವುಗಳ ವಾಸಸ್ಥಾನಗಳನ್ನು ಕುರಿತಂತೆ ಅವರ ಮತ್ತೊಂದು ವಚನ ಹೀಗಿದೆ.

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
ಕೆರೆ ಬಾವಿ ಹೂಗಿಡು ಮರಂಗಳಲ್ಲಿ
ಗ್ರಾಮ ಮಧ್ಯಂಗಳಲ್ಲಿ ಜಲಪಥ ಪಟ್ಟಣ ಪ್ರದೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣಂತಿ
ಕುಮಾರಿ ಕೊಡಗೂಸು ಎಂಬುವವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರ ಗಾವಿಲ ಅಂತರ ಬೆಂತರ
ಕಾಳಯ್ಯ ಮಾರಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ

ನಮ್ಮ ಕೂಡಲಸಂಗಮದೇವ ಶರಣೆಂಬುದೊಂದೆ ದಡಿ ಸಾಲದೆ ?

ಹಾಗೆಯೇ ಮತ್ತೊಂದು ವಚನ

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೊ
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೈವನೊಬ್ಬನೆ ಕೂಡಲಸಂಗಮದೇವ.

ಇಂತ ಅನೇಕ ವಚನಗಳಲ್ಲಿ ಜನಸಾಮಾನ್ಯರ ಮೌಢ್ಯ, ಅಜ್ಞಾನಗಳನ್ನು ಕುರಿತಂತೆ, ದೇವರುಗಳನ್ನು ಕುರಿತಂತೆ ತಿರಸ್ಕಾರವನ್ನು ಕಾಣಬಹುದು. ಜನರ ಇಂತಹ ಅವಿವೇಕತನದಿಂದಾಗಿ ಅವರ ವಿಚಾರಶಕ್ತಿ ಕುಂಠಿತಗೊಂಡಿದ್ದವು. ಆದ್ದರಿಂದ ಜನರನ್ನು ಅವುಗಳಿಂದ ಹೊರತಂದು ಏಕದೈವವನ್ನು ಪೂಜಿಸುವ ಭಕ್ತರೆಲ್ಲ 'ಒಂದೇ' ಆಗುವ ಸಮತಾ ಸಮಾಜವನ್ನು ನಿರ್ಮಿಸಲು ವಚನಕಾರರು ಶ್ರಮಿಸಿದರು.

**ಸ್ತ್ರೀಸಮಾನತೆ**

ಶರಣರು ಹೆಣ್ಣಿಗೆ ಪೂಜ್ಯಸ್ಥಾನವನ್ನು ಕೊಟ್ಟರು. ವಾಸ್ತವವಾಗಿ "ಯತ್ರ ನಾರ್ಯಸ್ತು ಪೂಜ್ಯಂತೇ....." ಎಂಬ ಉಕ್ತಿ ಸಾರ್ಥಕವಾದುದು ಶರಣರಲ್ಲಿ ಎನ್ನಬಹುದು. ಬಹು ಹಿಂದಿನಿಂದಲೂ ಹೆಣ್ಣು ಸಕಲ ಸ್ವಾತಂತ್ರ್ಯವನ್ನು ಕಳೆದುಕೊಂಡು ಎರಡನೇ ದರ್ಜೆಯ ಪ್ರಜೆಯಾಗಿದ್ದಳು. ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಹಕ್ಕುಗಳಿಂದ ದೂರವುಳಿಯುವಂತೆ ಅವಳನ್ನು ತಳ್ಳಲಾಗಿತ್ತು. ಹೆಣ್ಣೆಂದರೆ ಸೇವೆ, ವಿಲಾಸಗಳ ಒಂದು ಸಾಧನವೆಂಬ ಭಾವನೆ ಬೇರೂರಿತ್ತು. ಅ.ನ. ಕೃಷ್ಣರಾಯರು ತಮ್ಮ "ಬಸವಣ್ಣನವರ ಅಮೃತವಾಣಿ" ಕೃತಿಯಲ್ಲಿ ಪ್ರಾಚೀನ ಕಾಲದ ಹೆಣ್ಣಿನ ಸ್ಥಿತಿಯನ್ನು ಕುರಿತು ಹೀಗೆನ್ನುತ್ತಾರೆ. "ಜಗತ್ತಿನ ಎಲ್ಲ ಮಹಾಜ್ಯೋತಿಗಳನ್ನು ತನ್ನ ಉದರದಲಿ ಧರಿಸಿ ಪೊರೆದು, ಪೋಷಿಸಿ, ಅವರನ್ನು ಜಗತ್ತಿನ ಉದ್ಧಾರಕ್ಕೆ ಧಾರೆಯೆರೆಯುವ ತಾಯಿ ಒಂದು ಹೀನಜಂತುವಾಗಿದ್ದಳು" (ಪುಟ. 66). ಅ.ನ.ಕೃ ಅವರ ಈ ಮಾತು ಹೆಣ್ಣಿನ ಹೀನಸ್ಥಿತಿಯನ್ನು ತಿಳಿಸುತ್ತವೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವಾತಾ' ಎಂದು ಹೇಳಿದವರೇ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದೂ ಕಟ್ಟಳೆ ವಿಧಿಸಿದರು. ಹೆಣ್ಣನ್ನು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ವೃದ್ಧಾಪ್ಯದಲ್ಲಿ ಮಗ ರಕ್ಷಿಸುತ್ತಾನೆಂದು ಹೇಳಿ ಧರ್ಮಪಂಡಿತರು ಆಕೆಯನ್ನು ಪರಾವಲಂಬಿಯನ್ನಾಗಿ ಮಾಡಿದರು. ಇಂತಹ ಸಂದರ್ಭದಲ್ಲಿ ಅವಳಿಗಾದ ಅನ್ಯಾಯವನ್ನು ಕಂಡು ಪ್ರತಿಭಟಿಸಿ, ಪುರುಷ ಪ್ರಾಬಲ್ಯದ ವಿರುದ್ಧ ಮೊಟ್ಟಮೊದಲು ಬಂಡಾಯದ ದನಿ ಎತ್ತಿದವರು ಬಸವಾದಿ ಶರಣರು. ಹೆಣ್ಣಿಗೆ ಸಮಾಜ ರಚನೆಯಲ್ಲಿ ಸಮಾನ ಸ್ಥಾನವನ್ನಿತ್ತ ಹೊರತೂ ಆ ಸಮಾಜ ಉದ್ಧಾರವಾಗುವುದಿಲ್ಲ ಎಂಬುದು ವಚನಕಾರರ ನಿಲುವಾಗಿತ್ತು. ಹಾಗಾಗಿ ಅವರು ಮಹಿಳೆಯರಿಗೆ ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯವನ್ನು ನೀಡಿದರು. ಅನುಭವ ಮಂಟಪದಲ್ಲಿ ಸ್ತ್ರೀಯರು ಪ್ರವೇಶ ಪಡೆದು ಕ್ರಿಯಾತ್ಮಕವಾಗಿ, ಎಲ್ಲ ಚರ್ಚೆಗಳಲ್ಲಿ ಪುರುಷರಷ್ಟೇ ಸಕ್ರಿಯರಾಗಿ ಆಸಕ್ತಿ ವಹಿಸಿರುವುದನ್ನು ನೋಡಿದಾಗ ಶರಣರ ಮನೋಧೋರಣೆ ಎಂಥದ್ದು ಎಂಬುದರ ಅರಿವಾಗುತ್ತದೆ.

ಪುರುಷಪ್ರಧಾನ ಸಂಸ್ಕೃತಿಯ ವಿರುದ್ಧ ಧ್ವನಿಯೆತ್ತಿದ ಪ್ರಪಂಚದ ಮೊದಲ ಮಹಿಳೆಯೆಂದರೆ ಅಕ್ಕಮಹಾದೇವಿ ಎನ್ನಬಹುದು. ಆಕೆ ಅನುಭವ ಮಂಟಪದಲ್ಲಿ ಇತರ ಶರಣರೊಂದಿಗೆ ಕುಳಿತು ಸಾಹಿತ್ಯಿಕ ಮತ್ತು ಧಾರ್ಮಿಕ ವಿಚಾರಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದಳು. ಅವಳೊಂದಿಗೆ ಅನೇಕ ವಚನಕಾರ್ತಿಯರು ಆ ಸಂದರ್ಭದಲ್ಲಿ ಸಕ್ರಿಯರಾಗಿ ಭಕ್ತಿಯಲ್ಲಿ ಮಾತ್ರವಲ್ಲದೆ ಬುದ್ಧಿಯ ಸಿದ್ಧಿಯಲ್ಲೂ ಶರಣರಿಗೆ ಹೆಗಲೆಣೆಯಾಗಿ ನಿಂತಿದ್ದು ಬೆರಗುಗೊಳಿಸುವಂತದ್ದು. ಹೆಣ್ಣು ಗಂಡೆಂಬ ಭೇದವಿಲ್ಲದೆ ಎಲ್ಲರೂ ಬೆಳೆಯಬಲ್ಲರು–ಬೆಳಗಬಲ್ಲರು ಎಂಬುದಕ್ಕೆ ವಚನಕ್ರಾಂತಿಯೇ ಸಾಕ್ಷಿ.

ವಚನಕಾರ / ಶರಣರಿಗೆ ಹೆಣ್ಣು–ಗಂಡುಗಳೆಂಬ ಭೇದವಿಲ್ಲ. ಅದನ್ನು ದೇವರ ದಾಸಿಮಯ್ಯ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ, ಹೆಣ್ಣೂ ಅಲ್ಲ ರಾಮನಾಥ.

ಎಂದು ಹೇಳಿ ಗಂಡು–ಹೆಣ್ಣಿನ ನಡುವಿನ ಭೇದವನ್ನು ಅಳಿಸಿಹಾಕಿದರು. ಹೆಣ್ಣು–ಗಂಡೆಂಬುದು ಹೊರಗಿನ ರೂಪವೇ ಹೊರತು ಅವರೊಳಗಿನ ಆತ್ಮ ಯಾವುದೂ ಅಲ್ಲವೆಂಬುದು ಶರಣರ ಸ್ಪಷ್ಟ ಅಭಿಪ್ರಾಯ. 'ಹೆಣ್ಣು ಮಾಯೆಯಲ್ಲ' ಎಂಬುದು ಶರಣರ ಒಟ್ಟಿನ ಅಭಿಪ್ರಾಯ. ಅನೇಕ ಮಂದಿ ಹೊನ್ನು, ಮಣ್ಣಿನಂತೆ ಹೆಣ್ಣು ಮಾಯೆಯೆಂದು ಕರೆದಿದ್ದರು. ಈ ಮನೋಭಾವವನ್ನು ವಚನಕಾರರು ನಿರಾಕರಿಸಿದರು. ಬಸವಣ್ಣನವರು ಹೆಣ್ಣನ್ನು ಪೂಜ್ಯಭಾವದಿಂದ ಕಂಡರು.

ಎಲ್ಲಿ ನೋಡಿದಡಲ್ಲಿ ಮನವೆಳಿಸಿದಡಲ್ಲಿ
ನಿಮ್ಮಾಣೆ ನಿಮ್ಮ ಪ್ರಮಥರಾಣೆ ಪರವಧುವನು
ಮಹಾದೇವಿಯೆಂಬೆ ಕೂಡಲಸಂಗಮದೇವಾ.

ಪರವಧುವನ್ನು ಮಹಾದೇವಿ ಎಂದು ಗೌರವದಿಂದ ಕಂಡದ್ದು ವಚನಕಾರರ ಉದಾತ್ತ ಗುಣವನ್ನು ತೋರಿಸುತ್ತದೆ. ಸಿದ್ದರಾಮನ ಒಂದು ವಚನ ಇಂತಿದೆ.

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ; ಹಣ್ಣು ರಕ್ಕಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ

ಹೆಣ್ಣನ್ನು ಸಾಕ್ಷಾತ್ ದೇವರೆಂದು, ಗೌರವಿಸಿದ್ದು ಅತೀ ದೊಡ್ಡ ಸಾಧನೆಯೆಂದೇ ಹೇಳಬಹುದು.

ಅಕ್ಕಮಹಾದೇವಿಯ ಜೊತೆಗೆ ನೀಲಕ್ಕ, ಗಂಗಾದೇವಿ, ಲಿಂಗಮ್ಮ, ಗುಡ್ಡವ್ವೆ, ಕಾಳವ್ವೆ, ಆಯ್ದಕ್ಕಿ ಲಕ್ಕಮ್ಮ, ಕಾಲಕಣ್ಣಿಯ ಕಾಯಮ್ಮ, ಕದಿರ ರೆಮ್ಮವ್ವೆ, ಸತ್ಯಕ್ಕ, ಅಮುಗೆ ರಾಯಮ್ಮ ಮೊದಲಾದವರು ವಚನ ಚಳವಳಿಯಲ್ಲಿ ಸಕ್ರಿಯರಾದದ್ದು ಅದ್ಭುತ ಸಾಧನೆಯೆಂದೇ ಹೇಳಬಹುದು. ಅಧ್ಯಾತ್ಮದ ಜೊತೆಗೆ ಸಾಹಿತ್ಯ ರಚನೆಯಲ್ಲಿಯೂ, ಸಾಮಾಜಿಕ ಚಳುವಳಿಯಲ್ಲೂ ಈ ವಚನಗಾರ್ತಿಯರು ತಮ್ಮನ್ನು ತೊಡಗಿಸಿಕೊಂಡರು. ತಮ್ಮ ಅನುಭವಗಳನ್ನು ವಚನಗಳಲ್ಲಿ ಹಂಚಿಕೊಂಡರು. ಇವರ ಅನೇಕ ವಚನಗಳು ಸತ್ವದ ದೃಷ್ಟಿಯಿಂದ, ಸಾಹಿತ್ಯಿಕ ದೃಷ್ಟಿಯಿಂದ ಪರಿಣಾಮಕಾರಿಯಾಗಿವೆ.

ಇಂದಿಗೂ ಸ್ತ್ರೀಸ್ವಾತಂತ್ರ್ಯ, ಸ್ತ್ರೀಸಮಾನತೆ ಕುರಿತು ಅನೇಕ ಚರ್ಚೆಗಳು, ಆಂದೋಲನಗಳು ಜರುಗುತ್ತಿದ್ದರೂ ಹೆಣ್ಣಿಗೆ ಸಿಗಬೇಕಾದ ಸ್ಥಾನಮಾನ ಸಿಗುತ್ತಿಲ್ಲ. ಆದರೆ 800 ವರ್ಷಗಳ

ಹಿಂದೆಯೇ ಮಹಿಳೆಯರಿಗೆ ಸಮಾಜದ ಸಕಲ ಮಜಲುಗಳಲ್ಲಿಯೂ ಸಮಾನಾವಕಾಶ ಸಿಗುವಂತೆ ಮಾಡಿ ಸ್ತ್ರೀಸಮುದಾಯದ ಹೆಗ್ಗಳಿಕೆಗೆ ಕಾರಣರಾದ ವಚನಕಾರರ ಪ್ರಯತ್ನ ಆದರ್ಶವಾದುದು.

**ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳ ನಿರ್ಮೂಲನೆ**

ಜಾತಿ ಮತ್ತು ಅಸ್ಪೃಶ್ಯತೆಗಳು ಮಾನವಕುಲಕ್ಕೆ ಅಂಟಿಕೊಂಡ ಮಹಾಶಾಪ. ಪ್ರಸ್ತುತ ಸಂದರ್ಭದಲ್ಲೂ ಜಾತಿಯೇ ಯೋಗ್ಯತೆಯ ಮಾನದಂಡವಾಗಿಬಿಟ್ಟಿದೆ. ಇದು ಇಂದು ನೆನ್ನೆಯದಲ್ಲ. ಪ್ರಾಚೀನ ಕಾಲದಿಂದಲೂ ತನ್ನ ಕರಾಳಬಾಹುಗಳನ್ನು ಚಾಚುತ್ತಲೇ ಬಂದಿದೆ. ಹನ್ನೆರಡನೆಯ ಶತಮಾನಕ್ಕೂ ಹಿಂದೆಯೇ ವೈದಿಕಧರ್ಮ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಿತ್ತು. ಅವುಗಳಲ್ಲಿ ಅನೇಕ ಉಪಪಂಗಡಗಳೂ, ಜಾತಿಗಳೂ ಏರ್ಪಟ್ಟಿದ್ದವು. ಈ ನಾಲ್ಕು ವರ್ಣಗಳಿಗೆ ಸೇರದ ಅಸ್ಪೃಶ್ಯರೆಂಬ ವರ್ಗವೊಂದು ಬೆಳೆದು ಬಂದಿದ್ದು ಅವರ ಬದುಕು ಕ್ರೂರವಾಗಿತ್ತು. ವಿದ್ಯೆ, ಅಧಿಕಾರ, ಸಂಪತ್ತು ಕೆಲವರ ಸ್ವತ್ತಾಗಿತ್ತು. ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಅವಕಾಶಗಳಿಂದ ಸಂಪೂರ್ಣ ವಂಚಿತರಾಗಿದ್ದವರೆಂದರೆ ಅಸ್ಪೃಶ್ಯರು. ಇವರ ಬದುಕು ಹೀನಾಯವಾಗಿತ್ತು. ಇಂತಹ ಜಡಗೊಂಡ ಧಾರ್ಮಿಕತೆಯ ಕ್ರೌರ್ಯವನ್ನು, ಜನ್ಮಾಧಾರಿತ ಕುಲ–ಜಾತಿ ತಾರತಮ್ಯಗಳನ್ನು ಪ್ರಶ್ನಿಸುತ್ತಾ, ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳನ್ನು ನಿರ್ಮೂಲನಗೊಳಿಸುವ ನಿಟ್ಟಿನಲ್ಲಿ ಹನ್ನೆರಡನೆಯ ಶತಮಾನದ ಶರಣರು ನಡೆಸಿದ ಹೋರಾಟ ಸಾರ್ವಕಾಲಿಕ ಮೌಲ್ಯವುಳ್ಳದ್ದು. ತಮ್ಮ ವಚನಗಳಲ್ಲಿ ಶರಣರು ಪುರಾತನಕಾಲದ ರೂಢಿಗತ ನಂಬಿಕೆಗಳನ್ನು ಒಡೆದು ಹಾಕಿದರು. ವ್ಯಕ್ತಿಯ ಶ್ರೇಷ್ಠತೆ ಹುಟ್ಟಿನಿಂದಲ್ಲ, ಚಾರಿತ್ರ್ಯದಿಂದ ಎಂದು ಪ್ರತಿಪಾದಿಸಿದರು. ಜಾತಿಯ ಉಗಮವನ್ನು ಕುರಿತು ವಿಚಾರಪೂರ್ವಕವಾಗಿ, ತರ್ಕಬದ್ಧವಾಗಿ ಹೊಸ ವ್ಯಾಖ್ಯೆಯನ್ನು ನೀಡಿದರು. ಆ ಮೂಲಕ ಶೋಷಣೆಗೊಳಗಾಗಿ ನೊಂದಿದ್ದ ದಲಿತ ಸಮೂಹವನ್ನು ಅಪ್ಪಿಕೊಂಡು ಶರಣರನ್ನಾಗಿಸಿ ಸಮಾನರನ್ನಾಗಿಸಿದ್ದು ಸಾಮಾನ್ಯ ಸಂಗತಿಯಲ್ಲ.

ವರ್ಣಾಶ್ರಮ ಪದ್ಧತಿ ಪ್ರಬಲವಾಗಿ ನೆಲೆಯೂರಿದ್ದ ಸಂದರ್ಭದಲ್ಲಿ ಅದಕ್ಕೆ ಬಸವಣ್ಣನವರು ಹೊಸ ವ್ಯಾಖ್ಯಾನವನ್ನು ನೀಡಿದರು.

ಕೊಲುವವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ಎಂದು ಹೇಳುವ ಬಸವಣ್ಣನವರು ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುವ ಶರಣರೇ ಶ್ರೇಷ್ಠ ಕುಲಜರೆಂದು ಹೇಳುತ್ತಾರೆ. ಶರಣರು ವ್ಯಕ್ತಿಯ ಗುಣ, ನಡತೆ, ಆಚಾರಕ್ಕೆ ಬೆಲೆ ಕೊಡುತ್ತಿದ್ದರೇ ಹೊರತು ಅವನ ಕುಲ ಜಾತಿಗಲ್ಲ. ಅವರ ಅನೇಕ ವಚನಗಳು ಅದಕ್ಕೆ ನಿದರ್ಶನವಾಗಿವೆ.

ಈ ಮೊದಲೇ ಹೇಳಿದಂತೆ ವರ್ಣಾಶ್ರಮ ವ್ಯವಸ್ಥೆಯಲ್ಲಿ ವೈದಿಕರಿಗೆ ಪ್ರಮುಖ ಸ್ಥಾನವಿತ್ತು. ಬಸವಣ್ಣನವರೂ ಬ್ರಾಹ್ಮಣರ ಜಾತಿಯಲ್ಲಿ ಹುಟ್ಟಿದರೂ ಆ ಜಾತಿಯ ಹಂಗಿನಿಂದ ಹೊರಗೆ ಬಂದಿದ್ದರು. 'ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ' ಎಂದು ಹೇಳಿದ ಬಸವಣ್ಣನವರು ದಲಿತ ಸಮುದಾಯದವರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡರು. ದಲಿತ ಸಮುದಾಯದವರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮೊದಲಾದವರು ಬಸವಣ್ಣನವರಿಗೆ ಪ್ರಿಯರಾಗಿದ್ದರು.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ, ಕಾಣಯ್ಯ
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯ ?

ಅಸ್ಪೃಶ್ಯತೆ ಎಂಬುದು ಅರ್ಥವಿಲ್ಲದ ಆಚರಣೆ. ಅದನ್ನು ತೊಡೆದು ಹಾಕಲು ಬಸವಣ್ಣನವರು ನಿರ್ಧರಿಸಿದ್ದರು. ಹಾಗಾಗಿ ತಮ್ಮ ಹುಟ್ಟು ಮತ್ತು ಬಂಧುತ್ವವನ್ನು ಆ ವರ್ಗದಲ್ಲಿ ಕಂಡುಕೊಂಡು ಸಮಾಜಕ್ಕೆ ಸಂದೇಶ ರವಾನಿಸಿದರು. ಹಿಂದೂ ಸಮಾಜದ ಬಹುಕಾಲದ ದಬ್ಬಾಳಿಕೆಯಿಂದ ಅಸ್ಪೃಶ್ಯರು ತೀರ ನಿಕೃಷ್ಟ ಬದುಕನ್ನು ಸಾಗಿಸುತ್ತಿದ್ದರು. ತಮ್ಮ ವಾತಾವರಣದಿಂದ ಹೊರ ಬರಲು ಅವರಿಗೆ ಅವಕಾಶವಿರಲಿಲ್ಲ. ಬಸವಣ್ಣ ಅವರ ಪರ ನಿಂತು, ಅವರಿಗೆ ದನಿಯಾಗಿ ಅವರನ್ನು ಅವ್ಯವಸ್ಥೆಯಿಂದ ಮೇಲಕ್ಕೆತ್ತಿದರು. ಹರಭಕ್ತರಲ್ಲಿ ಜಾತಿಭೇದವಿಲ್ಲ ಹೊಲೆಯ ಹಾರುವನೆಂಬ ವ್ಯತ್ಯಾಸವಿಲ್ಲ ಎಂದು ಹೇಳಿ ಸಹಪಂಕ್ತಿಭೋಜನ, ವಿವಾಹ ಸಂಬಂಧಗಳನ್ನು ಪ್ರೋತ್ಸಾಹಿಸಿದರು. ಒಂದು ಬಗೆಯಲ್ಲಿ ಜಾತಿಯೆಂಬ ರೋಗದ ನಿರ್ಮೂಲನೆಗಾಗಿ ಬಹುದೊಡ್ಡ ಶಸ್ತ್ರಚಿಕಿತ್ಸಕನಂತೆ ಕೆಲಸ ಮಾಡಿದರು.

ವೈದಿಕರು ತಾವೇ ಶ್ರೇಷ್ಠರೆಂದು ತಮ್ಮ ಶ್ರೇಷ್ಠತ್ವಕ್ಕೆ ತಮ್ಮ ಪೂರ್ವಜರ ಉದಾಹರಣೆಗಳನ್ನು ಕೊಡುತ್ತಿದ್ದರು. ವಚನಕಾರರು ಈ ಶ್ರೇಷ್ಠರ ಕುಲಗಳೇನಾಗಿತ್ತೆಂಬ ಚಾರಿತ್ರಿಕ ಸತ್ಯದ ಮೂಲಕ್ಕೆ ಕೈ ಹಾಕಿ ಅದರ ಮುಖವಾಡವನ್ನು ಬಯಲುಗೊಳಿಸಿದರು. ವೈದಿಕರು ಶ್ರೇಷ್ಠರೆನ್ನುವ ಇವರು ಕೀಳು ಜಾತಿಯಲ್ಲಿಯೇ ಹುಟ್ಟಿದವರು. ಅಂತಹವರ ಸಂತಾನವಾದ ವೈದಿಕರು ಅದ್ಹೇಗೆ ಶ್ರೇಷ್ಠರೆಂದು ಮಾದಾರ ಚೆನ್ನಯ್ಯ ಈ ವಚನದಲ್ಲಿ ಪ್ರಶ್ನಿಸುತ್ತಾನೆ.

ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ
ದಧೀಚಿ ಕಿಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ
ಕೌಂಡಿನ್ಯ ನಾವಿದನೆಂಬುದದನರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕೆ ?
ಇಂತೀ ಸಪ್ತಋಷಿಯರುಗಳೆಲ್ಲರೂ ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು
ಹೋರುವ ಹೊತ್ತುಹೋಕರ ಮಾತೇತಕೆ ?
ಕೈಯುಳಿ ಕತ್ತಿ ಅಡೆಗೊಂಟಕ್ಕಡಿಯಾಗಬೇಡ
ಅರಿ ನಿಜಾತ್ಮರಾಮರಾಮನಾ

ಹೀಗೆ ಜಾತಿ ಶ್ರೇಷ್ಠರ ಮುಖವಾಡವನ್ನು ವಚನಕಾರರು ಹರಿದೊಗೆದರು. ವೈದಿಕರು ಕೀಳೆನ್ನುವ ಜಾತಿಗಳಲ್ಲಿ ಹುಟ್ಟಿದವರಾದ ದುರ್ವಾಸ, ವ್ಯಾಸ, ಕೌಂಡಿನ್ಯ, ಅಗಸ್ತ್ಯ ಮೊದಲಾದವರು ತಮ್ಮ ಗುಣಸಾಧನೆಯಿಂದ ಪ್ರತಿಭಾಶಾಲಿಗಳೂ, ಜ್ಞಾನಿಗಳೂ, ಋಷಿಮುನಿಗಳೂ ಆದವರೆಂದು ತಿಳಿಸುತ್ತಾ ಕುಲಕ್ಕೂ ಸಾಧನೆಗೂ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಸಿದ್ದರಾಮನ ಒಂದು ವಚನ ಹೀಗಿದೆ.

ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೊ
ಕುಲವೇ ಡೋಹರನ ? ಕುಲವೇ ಮಾದಾರನ
ಕುಲವೇ ದುರ್ವಾಸನ ? ಕುಲವೇ ವ್ಯಾಸನ ? ಕುಲವೇ ವಾಲ್ಮೀಕನ ?
ಕುಲವೇ ಕೌಂಡಿನ್ಯನ ? ಕುಲವ ನೋಳ್ಪಿಡೆ ಹುರುಳಿಲ್ಲ.

ನಡೆ, ನುಡಿ, ಆಚಾರ, ವ್ಯಕ್ತಿತ್ವವೇ ಮುಖ್ಯವೇ ಹೊರತು ಕುಲವಲ್ಲ ಎಂಬುದು ಶರಣರ ನಿಲುವಾಗಿತ್ತು. ಶರಣರು ನಡೆದಂತೆ ನುಡಿದವರು, ನುಡಿದಂತೆ ನಡೆದವರು. ಅಂದು ಕಲ್ಯಾಣದಲ್ಲಿ ನಡೆದ ವಿವಾಹ ಘಟನೆಯೇ ಅದಕ್ಕೆ ಉತ್ತಮ ಸಾಕ್ಷಿ. ಅಸ್ಪೃಶ್ಯ ಜಾತಿಗೆ ಸೇರಿದ ಹರಳಯ್ಯನ ಮಗನಾದ ಶೀಲವಂತನಿಗೆ, ಬ್ರಾಹ್ಮಣ ಮಧುವಯ್ಯ ತನ್ನ ಮಗಳಾದ ಕಲಾವತಿಯನ್ನು ಕೊಟ್ಟು ಮದುವೆ ಮಾಡಿದನು. ಬಸವಣ್ಣ ಮೊದಲಾದ ಶರಣರ ಸಮ್ಮುಖದಲ್ಲಿಯೇ ಈ ವಿವಾಹ ಜರುಗಿತು. ಆ ಕಾಲಕ್ಕೆ ಇದು ಬಹುದೊಡ್ಡ ಕ್ರಾಂತಿ. ಪ್ರಸ್ತುತ ಸಂದರ್ಭದಲ್ಲಿಯೂ ಇದು ಇನ್ನು ಅಸಾಧ್ಯವಾಗಿಯೇ ಕಂಡುಬರುತ್ತಿದೆ. ಹಾಗಾಗಿ ಅಸಾಮಾನ್ಯ ಸಂಗತಿ ಇದಾಗಿತ್ತು.

ಶರಣರು ಜಾತೀಯತೆಯನ್ನು ವಿರೋಧಿಸಿದರು. ಇಡೀ ಮಾನವಕುಲವೇ ಒಂದೇ ಎಂದು ಸಾರಿದರು. ಧ್ವನಿಯೇ ಇಲ್ಲದೆ ಮೂಕರಾಗಿದ್ದ ದಮನಿತ ಸಮುದಾಯದ ಜನರನ್ನು ಸಂಘಟಿಸಿ ಸಮಾಜದಲ್ಲಿ ಅವರಿಗೆ ಗೌರವದ ಸ್ಥಾನವನ್ನು ನೀಡಿದರು. ಜಾತಿಯ ಕಲ್ಪನೆಗಳಿಗೆ ಹೊಸ ಅರ್ಥ ಮತ್ತು ವ್ಯಾಖ್ಯೆಗಳನ್ನು ನೀಡಿದರು. ಶೋಷಣೆಗೊಳಗಾಗಿದ್ದ ಜನರನ್ನು ಮುಕ್ತಗೊಳಿಸಲು ಪ್ರಯತ್ನಿಸಿದರು. ದಾಸೋಹಪದ್ಧತಿ, ಸಹಪಂಕ್ತಿಭೋಜನ, ಧಾರ್ಮಿಕ ಆಚರಣೆಗಳಲ್ಲಿ ಎಲ್ಲರಿಗೂ ಸಮಾನ ಅವಕಾಶ. ಅನುಭವಮಂಟಪಕ್ಕೆ ಎಲ್ಲ ಜಾತಿವರ್ಗದವರಿಗೂ ಅವಕಾಶ ನೀಡಿದ್ದು ಸಾಮಾನ್ಯ ಸಂಗತಿಯೇನಲ್ಲ. ಒಟ್ಟಾರೆ ವಚನಕಾರರು ಜಾತಿವ್ಯವಸ್ಥೆಯನ್ನು ನಾಶಪಡಿಸಿ, ಜಾತಿರಹಿತ ವರ್ಗರಹಿತ ಸಮಾಜ ರಚನೆಯ ಕನಸನ್ನು ಕಂಡು ಅದನ್ನು ಸಾಕಾರಗೊಳಿಸಲು ಪ್ರಯತ್ನಿಸಿದರು.

ಒಟ್ಟಾರೆ ಶರಣರು ಹನ್ನೆರಡನೆಯ ಶತಮಾನದಲ್ಲಿ ರೂಪಿಸಿದ್ದು ಬಹುಮುಖವಾದ ಆಮೂಲಾಗ್ರವಾದ ಮಹಾಕ್ರಾಂತಿಯನ್ನು. ಅವರ ಚಳವಳಿ ಯಾವುದೇ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅದು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಇತ್ಯಾದಿ ಎಲ್ಲವೂ ಹೌದು. ಧರ್ಮ, ದೇವರು ಕೆಲವರ ಸ್ವತ್ತಾಗಿದ್ದನ್ನು ಖಂಡಿಸಿ ಸಾರ್ವತ್ರೀಕರಣಗೊಳಿಸಿದರು. ಮೌಢ್ಯ, ಕಂದಾಚಾರಗಳು, ಹೀನ ಆಚರಣೆಗಳನ್ನು ಟೀಕಿಸಿ ಸರಳ ಆಚರಣೆಗಳನ್ನು ಅನುಷ್ಠಾನಗೊಳಿಸಿದರು. ತುಳಿತಕ್ಕೊಳಗಾಗಿದ್ದ ಕೆಳವರ್ಗದವರನ್ನು ಮೇಲೆತ್ತುವ ಕಾರ್ಯದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು. ಅಸ್ಪೃಶ್ಯರಲ್ಲಿ ಆತ್ಮಾಭಿಮಾನವನ್ನು ಮೂಡಿಸಿದರು. ಸಹಭೋಜನ, ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿದರು. ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ನೀಡಿದರು. 'ಕಾಯಕವೇ ಕೈಲಾಸ'ವೆಂಬ ತತ್ವದಲ್ಲಿ ನಂಬಿಕೆ ಇಟ್ಟ ಶರಣರು ಪರಾವಲಂಬಿಗಳಾಗದೆ ಸ್ವಾವಲಂಬಿಗಳಾಗಿ ಆರ್ಥಿಕ ಸ್ವಾವಲಂಬನೆ ಸಾಧಿಸಿದರು. ಎಲ್ಲ ಕ್ಷೇತ್ರಗಳಲ್ಲಿದ್ದ ಜಡತ್ವವನ್ನು ಹೋಗಲಾಡಿಸಿ ಚೈತನ್ಯ ತುಂಬಿದರು. ಈ ಹಿನ್ನೆಲೆಯಲ್ಲಿ ಶರಣರು ಕಟ್ಟಬಯಸಿದ್ದು ಸರ್ವಶೋಷಣೆಗೊಳಿಂದಲೂ ಮುಕ್ತವಾದ, ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ ಒಂದು ಆದರ್ಶ ಸಮಾಜವನ್ನು. ಸಮತಾವಾದ, ಸಮಾಜವಾದ, ಪ್ರಜಾಪ್ರಭುತ್ವ ಮುಂತಾದವು ಈ ಯುಗದ ಮೌಲ್ಯಗಳಾಗಿದ್ದವು. ಈ ಮೌಲ್ಯಗಳ ಸಾಕ್ಷಾತ್ಕಾರಕ್ಕಾಗಿ ಬಸವಾದಿ ಶರಣರು ಶ್ರಮಿಸಿದ ರೀತಿ ಅಚ್ಚರಿ ಮತ್ತು ಅನನ್ಯವಾದುದು. ಹಾಗಾಗಿ ವಚನಕಾರರಿಂದ ಕಲಿಯಬೇಕಾದ್ದು ಅಪಾರವಾಗಿದೆ. ಅವರ ಸಂದೇಶಕ್ಕೆ ಕೊನೆಯಿಲ್ಲ, ಕುಂದಿಲ್ಲ. ಅದನ್ನು 'ಅರಿತವನೇ ಶರಣ, ಅರಿಯದಿದ್ದಡೆ ಮಾನವ'.

## ಆಧಾರ ಗ್ರಂಥಗಳು

೧. ಬಸವಣ್ಣನವರ ವಚನ ಸಂಪುಟ – ಸಂ. ಡಾ.ಎಂ.ಎಂ.ಕಲಬುರ್ಗಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧

೨. ಅಲ್ಲಮಪ್ರಭುದೇವರ ವಚನ ಸಂಪುಟ – ಸಂ. ಡಾ.ಬಿ.ವಿ.ಮಲ್ಲಾಪುರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧

೩. ೩. ಶಿವಶರಣೆಯರ ವಚನ ಸಂಪುಟ – ಸಂ. ಡಾ.ವೀರಣ್ಣ ರಾಜೂರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧

೪. ೪. ಸಂಕೀರ್ಣ ವಚನ ಸಂಪುಟ ೧ – ಸಂ. ಡಾ.ಎಂ.ಎಂ.ಕಲಬುರ್ಗಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧

೫. ೫. ಚೆನ್ನಬಸವಣ್ಣನವರ ವಚನ ಸಂಪುಟ – ಸಂ. ಡಾ.ಬಿ.ವಿ.ಮಲ್ಲಾಪುರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧